ಓ. ಎಸ್ . 26/2016 ಡಿ .ಡಬ್ಲ್ಯೂ - 4 ದಿಲಶಾದ ಬೇಗಂ

**(ದಿನಾಂಕಃ 28-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ವಾಟೀಸವಾಲು : ವಾದಿ ಪರ ಶ್ರೀ. ಕೆ ಬಿ ಕೆ ವಕೀಲರಿಂದ -**

ನಾನು ಪಿಯುಸಿ ವರೆಗೂ ಕನ್ನಡದಲ್ಲಿ ಕಲಿತಿರುತ್ತೇನೆ. ನಾನು ಹೆಲ್ತ ಡಿಪಾರ್ಟಮೆಂಟನಲ್ಲಿ ಹೆಲ್ತ ಸುಪರವೈಸರ್ ಆಗಿ ಕೆಲಸ ಮಾಡುತ್ತಿದ್ದೆ. ಈ ದಾವೆಯನ್ನು ಶರೀಪ ಇವರು ಶಂಕರ ಕಟ್ಟಿ, ಕಾಶಿಂ ಬಾಗೇವಾಡಿ, ತುಕಾರಾಮ ಕೋಳಿ ಹಾಗೂ ಮುನಷಿ ಇವರ ಮೇಲೆ ದಾವಾ ಮಾಡಿದ್ದಾರೆ. ಸರ್ವೆ ನಂ. 118/ಎ ಪೂರಾ ಜಾಗವನ್ನು ಅವರ ಗಂಡ ಮಾರಾಟ ಮಾಡಿದ್ದು, ಆದರೂ ಸಹ ವಾದಿ ಆ ಜಾಗ ನನ್ನ ಗಂಡ ಮಾರಾಟ ಮಾಡಿಲ್ಲ, ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದುಈ ದಾವೆ ಮಾಡಿದ್ದಾರೆ. ಸರ್ವೆ ನಂ. 118 ಎಷ್ಟು ಎಕರೆ ಇದೆ ಎಂದು ನನಗೆ ಮಾಹಿತಿ ಇಲ್ಲ. ಸರ್ವೆ ನಂ. 118 ಜಮೀನಿಗೆ ಸಂಬಂದಪಟ್ಟಂತೆ ಎನ್ ಎ ಆರ್ಡರ ಕಾಪಿಯನ್ನು ನಾನು ನೋಡಿದ್ದೆನೆ. ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಕಟ್ಟಿದ ಮನೆಯನ್ನು ಖರೀದಿ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ಚೌಗಲಾ ವಕೀಲರು ಮಾಹಿತಿ ನೀಡಿದ್ದಾರೆ. ಸರ್ವೆ ನಂ. 118 ರಲ್ಲಿ ಎಷ್ಟು ಎಕರೆ ಹಾಗೂ ಯಾವ ವರ್ಷದಲ್ಲಿ ಎನ್ ಎ ಆಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 118 ರಲ್ಲಿ ಮೊಹಮ್ಮದ ಶಫೀ ಮೊದಲು 2 ಎಕರೆ ಎನ ಎ ಮಾಡಿದ ಅದಕ್ಕೆ ಪ್ಲಾಟ ನಂ. 1 ರಿಂದ 46 ನಂಬರಗಳನ್ನು ಕೊಟ್ಟ ಎಂದರೆ ನನಗೆ ಗೊತ್ತಿದೆ. ಅದರ ಪಶ್ಚಿಮಕ್ಕೆ 30 ಗುಂಟೆ ಖಾಲಿ ಜಾಗ ಇತ್ತು ಎಂದರೆ ನಿಜ. ಆ 30 ಗುಂಟೆಯ ಪೂರ್ವಕ್ಕೆ 2 ಎಕರೆ 10 ಗುಂಟೆ ಎನ್ ಎ ಮಾಡಲಾಯಿತು ಎಂದರೆ ನಿಜ. ಅದಕ್ಕೆ 1 ರಿಂದ 47 ಪ್ಲಾಟ ನಂಬರಗಳನ್ನ ಕೊಟ್ಟರು ಎಂದರೆ ನಿಜ. ಸದರಿ 30 ಗುಂಟೆ ಎನ ಎ ಆಗದ ಜಾಗ ಮೊಹಮ್ಮದ ಶಪಿ ಇವರ ಹೆಸರನಲ್ಲಿಯೆ ಉಳಿಯಿತು ಎಂದರೆ ನಿಜ. ಮೊಹಮ್ಮದ ಶಪಿ ಇವರು ತೀರಿಕೊಂಡರು ಎಂದರೆ ನಿಜ. ಅವರ ತೀರಿಕೊಂಡ ನಂತರ ಶರೀಪ 30 ಗುಂಟೆ ಜಾಗವನ್ನು ತನ್ನ ಹೆಸರಿಗೆ ವಾರಸಾ ಮಾಡಿಕೊಂಡರು ಎಂದರೆ ನಿಜ.

2. ಆ 30 ಗುಂಟೆ ಜಾಗವನ್ನು ಸರ್ವೆ ಮಾಡಲು ಶರೀಪ ಈ ದಾವೆ ಮಾಡುವ ಪೂರ್ವದಲ್ಲಿ ಅರ್ಜಿ ಹಾಕಿದರು ಎಂದರೆ ನಿಜ. ಆ ಪ್ರಕಾರ ಹುಕ್ಕೇರಿ ಸರ್ವೆಯರ್ ಬಂದು ಮೊಜಮಾಪ ಮಾಡಿ ಆ

30 ಗುಂಟೆ ಜಾಗದಲ್ಲಿ ಕೆಲವರು ಮನೆಗಳನ್ನು ಕಟ್ಟಿದ್ದಾರೆ ಎಂದು ವರದಿ ನೀಡಿದರು ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ವಾಟೀಸವಾಲು : ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**